ಮೇಲೆ ಕುಳಿತುಕೊಳ್ಳುತ್ತಾ, ''ಆವೊತ್ತು ನಾನೇಳ್ಳಿಲ್ವೆ ಅಕ್ಕಯ್ಯಮ್ಮ, ಅಂಗನವಾಡಿ ಸಂಬಳಕ್ಕಿಂತ್ಲೂ ಹತ್ತು ಪಟ್ಟು ದುಡಿತಾ ಇಲ್ವೆ ನೀನು. ಇನ್ನಾ ಒಂದು ಪ್ಲಾನ್ ಹೇಳಿಕೊಡ್ತೀನಿ, ಮಾಡೋದಾದ್ರೆ ಮಾಡು. ರಾಣೆಮ್ಮಜ್ಜಿ ಹುಣಿಸೆ ಮರದ ಕೆಳ್ಗೆ ಒಂದು ಸಣ್ಣ ಗುಡ್ಲಾಕ್ಕೊಂಡು ನಿನ್ನ ಅಂಗಡಿನ ಅಲ್ಲಿ ಹಾಕ್ಕೊ. ತಗ್ಗಳ್ಳಿ, ಹನುಮಂತಪುರ, ಕೊಂಡವಾಡಿ ಜನ ಅಲ್ಲೇ ಓಡಾಡೋದು. ಅದೂ ಅಲ್ದೆ ಈಗ ಅಲ್ಲಿ ಗೌರ್ಮೆಂಟ್ ಬಸ್ಸೂ ಓಡಾಡ್ತೈತೆ. ಎಷ್ಟೋ ಜನ ಊರಿನೊಳಕ್ಕೆ ಬಂದು ನಿನ್ನ ಮನೆತಾವ ನಿಂತ್ಕಂಡು ಆಮ್ಲೇಟ್ ತಿನ್ನೋಕೆ ಹಿಂದ್ ಮುಂದ್ ನೋಡ್ತಾರೆ. ನಾನೇಳ್ದಂಗೆ ಅಲ್ಲಿ ಅಂಗ್ಡಿ ಇಟ್ಟು ನೋಡು, ಇದಕ್ಕಿಂತ ಮೂರು ಪಟ್ಟು ಜಾಸ್ತಿ ವ್ಯಾಪಾರ ಆಗ್ದಿದ್ರೆ ಕೇಳು. ಗೌರ್ಮೆಂಟ್ ಜಾಗ ಅದು, ನಾನು ಬೇಕಾದ್ರೆ ಚೇರ್ಮೆನ್ರಿಗೆ ಹೇಳ್ತೀನಿ.'' ಎಂದು ಅಕ್ಕಯ್ಯಮ್ಮ ಮಾಡಿಕೊಟ್ಟ ಬಿಸಿಬಿಸಿ ಆಮ್ಲೇಟನ್ನು ಮುರಿದು, ಉರುಬಿ ಬಾಯಲ್ಲಿ ಹಾಕಿಕೊಂಡಿದ್ದಳು.

ಅದೇ ಟೈಮಿಗೆ ಆಮ್ಲೇಟಿಗೆ ಬಂದಿದ್ದ ಈರಪ್ಪನೋರ ವೆಂಕಟೇಶ ಸರೋಜಮ್ಮನ ಮಾತು ಕೇಳಿಸಿಕೊಂಡು, ''ಅಮ್ಮೋ ಅಕ್ಕಯ್ಯಮ್ಮ, ಸರೋಜಮ್ಮಕ್ಕಯ್ಯನ ಮಾತ್ನ ತೆಗೆದಾಕ್ದೆ ಪಾಲ್ಸು. ನಿಜ, ನೀನೇನಾದ್ರೂ ಅಲ್ಲಿ ಅಂಗಡಿ ತೆರೆದಿದ್ದೆ ಆದ್ರೆ ಒಂದೇ ಒಂದು ವರ್ಷದಲ್ಲಿ ಬ್ಯಾಲ್ಯದ ಪೆಟ್ಗೆ ಅಂಗಡಿ ರಂಗಮ್ಮನ್ನ ಮೀರಿಸ್ತೀಯ. ಬರಿ ಪಕೋಡ, ಬೊಂಡ ಹಾಕೇ ಆವಮ್ಮ ಒಂದು ಸಣ್ಣ ಹೊಸಮನೆ ಕಟ್ಟಿದ್ದಲ್ದೆ ಮಗಳ ಮದುವೆನೂ ಧಾಂಧೂಂ ಅಂತ ಮಾಡಿದ್ಲು. ನನ್ನ ಮಗ ನಾಗರಾಜ ಎಂಟ್ನೆ ಕ್ಲಾಸ್ ಫೆಲಾಗಿ ಮನೇಲಿ ಬಿದ್ದವ್ನೆ. ಬೇಕಾದ್ರೆ ಅವುನ್ನ ಜೊತೆಗಾಕ್ಕೊ ನೀರ್ಗೀರ್ ತಂದ್ಕೊಡೋದು, ತಟ್ಟೆ ಪಟ್ಟೆ ತೊಳ್ಯೋದು, ಅಂಗ್ಡಿಗಿಂಗ್ಡಿಗೆ ಹೋಗ್ಬರೋದು ಎಲ್ಲಾ ನೀಟಾಗಿ ಮಾಡ್ತಾನೆ. ನೀನು ಎಷ್ಟು ಕೊಡ್ತಿಯೋ ಅಷ್ಟ್ ಕೊಡು, ನಾನು ಎರ್ಡ್ ಮಾತಾಡಲ್ಲ. ಅವ್ನು ಪೋಲಿಗೀಲಿ ಬೀಳ್ದೆ ಹದ್ಬಸ್ತಾಗಿದ್ರೆ ಸಾಕು.'' ಎಂದು ಸರೋಜಮ್ಮನ ಮಾತುಗಳಿಗೆ ಪುಷ್ಟಿ ಕೊಟ್ಟಿದ್ದ. ''ಯಂಗೊ ಯೋಚ್ನೆ ಮಾಡು ಅಕ್ಕಯ್ಯಮ್ಮ'' ಎಂದು ಸರೋಜಮ್ಮ ಹೊರಟು ನಿಂತರು. ಎಷ್ಟು ಬಲವಂತಪಡಿಸಿದರೂ ಸರೋಜಮ್ಮನಿಂದ ಆಮ್ಲೇಟ್ ಕಾಸನ್ನು ಅಕ್ಕಯ್ಯಮ್ಮ ಇಸಿದುಕೊಳ್ಳಲಿಲ್ಲ. ಸರೋಜಮ್ಮ ಮತ್ತು ವೆಂಕಟೇಶಪ್ಪನ ಮಾತುಗಳು ಆ ಮಧ್ಯಾಹ್ನವೆಲ್ಲ ಅಕ್ಕಯ್ಯಮ್ಮ ಮನಸ್ಸಲ್ಲಿ ಗುಂಗರಿ ಹುಳದಂತೆ ಗುಂಯ್ ಗುಟ್ಟಿದ್ದವು. ಅಂದು ಸಾಯಂಕಾಲ ಹಾಲು ಡೈರಿ ಹತ್ತಿರ ಹೋಗಿ ರಾಮದಾಸಪ್ಪ, ನಾಗರೆಡ್ಡಿ, ದೇವರಾಜ, ರಾಮಕೃಷ್ಣಯ್ಯ ಮುಂತಾದವರ ಬಳಿ ವಿಷಯವನ್ನು ಪ್ರಸ್ತಾಪ ಮಾಡಿದ್ದಳು. ಎಲ್ಲರೂ ''ಆಯ್ತು ಹೋಗಕ್ಕಯ್ಯಮ್ಮ ಅದೇನ್ ಮಾಡ್ತಿಯೋ ಮಾಡ್ಕ'' ಎಂದು ಸಪೋರ್ಟ್ ಕೊಡುವಂತೆ ಮಾತನಾಡಿದ್ದರು.

ಇದಾದ ಹದಿನೈದು ದಿನಗಳಲ್ಲಿ ಅಕ್ಕಯ್ಯಮ್ಮನ ಪೆಟ್ಟಿಗೆಅಂಗಡಿ ಎದ್ದಿತ್ತು. ಈರಪ್ಪನೋರ ವೆಂಕಟೇಶನೇ ಮಧುಗಿರಿಯಿಂದ ಒಂದು ಬೋರ್ಡ್ ಬರೆಸಿಕೊಂಡು ಬಂದು ಪೆಟ್ಟಿಗೆಅಂಗಡಿಯ ಮುಂದೆ ನೇತಾಕಿದ್ದ. ಬೋರ್ಡಿನಲ್ಲಿ ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿ, ಒಂದು ಆಮ್ಲೇಟ್ 10 ರೂಪಾಯಿ, ಸಾಲ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ, ಓನರ್ ಅಕ್ಕಯ್ಯಮ್ಮ. ಎಂದು ಒಂದರ ಕೆಳಗೆ ಒಂದರಂತೆ ನಾಲ್ಕು ಸಾಲುಗಳನ್ನು ಬರೆಯಲಾಗಿತ್ತು. ಒಂದೆರಡು ಬೆಂಚುಗಳು, ಒಂದು ಗ್ಯಾಸ್ ಸ್ಟೌ, ಒಂದೇ ಬಾರಿಗೆ ನಾಲ್ಕು ಆಮ್ಲೇಟ್‌ಗಳನ್ನು ಹಾಕುವ ಹೆಂಚು, ಪೇಪರ್ ಪ್ಲೇಟುಗಳು, ಒಂದು ನೀರಿನ ಡ್ರಮ್ ಮತ್ತು ಚೆಂಬು ಅಕ್ಕಯ್ಯಮ್ಮನ ಅಂಗಡಿಯಲ್ಲಿ ಆಶ್ರಯ ಪಡೆದುಕೊಂಡಿದ್ದವು. ಮಧ್ಯಾಹ್ನ ಹನ್ನೆರಡು ಗಂಟೆಯಿಂದ ಎರಡು ಗಂಟೆಯವರೆಗೆ, ಸಂಜೆ ಐದೂವರೆಯಿಂದ ಏಳೂವರೆಯವರೆಗೂ ಆಮ್ಲೇಟ್ ವ್ಯಾಪಾರದ ಟೈಮಾಗಿತ್ತು. ಪ್ರಾರಂಭದಿಂದಲೇ ಆಮ್ಲೇಟ್ ವ್ಯಾಪಾರ ಚನ್ನಾಗಿ ನಡೆಯಲಾರಂಭಿಸಿತು. ಸಂಜೆ ಹೊತ್ತು ಎಣ್ಣೆ ಹೊಡೆಯುವವರು ಎಲ್ಲೋ ಮರೆಯಲ್ಲಿ ಎಣ್ಣೆ ಹಾಕಿ ಬಂದು ಅಕ್ಕಯ್ಯಮ್ಮನ ಅಂಗಡಿಯ ಮುಂದೆ ನಿಂತು ಗಬಗಬ ಆಮ್ಲೇಟ್ ತಿಂದು ಹೋದರೆ ಇನ್ನು